ಓ ಎಸ್ ನಂಃ 98-15
ಡಿ ಡಬ್ಲ್ಯೂ ಃ 2

ದಿಃ 18-03-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಜಿ ಆರ್ ವಕೀಲರಿಂದ

11. ಗುಂಡೋಜಿರಾವ್ ರವರು ನನಗೆ ಮಾವನಾಗಬೇಕು. ಅವರು ನನ್ನ ಹೆಂಡತಿಯ ತಂದೆಯಾಗಿರುತ್ತಾರೆ. ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲು ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಿರುವುದಿಲ್ಲ. ಈ ದಿನ ನನ್ನ ಬಾಮ್ಮೈದಾ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದು ಸಾಕ್ಷಿ ಹೇಳಿಸುತ್ತಿದ್ದಾರೆ ಎಂದರೆ ನಿಜ. ವಾದಿ ಈ ದಾವೆಯನ್ನು ಸುಲ್ತಾನ್ ರಾವ್, ಲಕ್ಷ್ಮಣ್ ರಾವ್, ಪ್ರಮೀಳಾ ಬಾಯಿ, ಮತ್ತು ಇಂದಿರಾರವರ ವಿರುದ್ದ ಹೂಡಿರುತ್ತಾರೆ. ಈ ದಾವೆಯನ್ನು ಅವರ ಆಸ್ತಿಯ ಭಾಗದ ಬಗ್ಗೆ ಹೂಡಿರುತ್ತಾರೆ. ಈ ದಾವೆಯನ್ನು ಸರ್ವೆ ನಂ 25/2, 57/2 ಮತ್ತು 56/2 ರ ಮೇಲೆ ಹೂಡಲಾಗಿದೆ. ನನ್ನ ಮುಖ್ಯ ವಿಚಾರಣೆಯ ವಿಷಯವನ್ನು ನಾನೇ ಹೇಳಿ ಬರೆಸಿರುತ್ತೇನೆ.

12. ನಿಪಿ 1 ಮತ್ತು ಖಂಡೋಜಿ ರಾವ್ ಹಾಗೂ ಗುಂಡೋಜಿ ರಾವ್ ಜಂಟಿಯಾಗಿ ಖರೀದಿ ಮಾಡಿದ ಆಸ್ತಿಯ ಕ್ರಯಪತ್ರ ಎಂದರೆ ನಿಜ. ನಿಪಿ 2 ಸಹ ಖಂಡೋಜಿ ರಾವ್ ಹಾಗೂ ಗುಂಡೋಜಿ ರಾವ್ ಜಂಟಿಯಾಗಿ ಖರೀದಿ ಮಾಡಿದ ಆಸ್ತಿಯ ಕ್ರಯಪತ್ರ ಎಂದರೆ ನಿಜ. ನಿಪಿ 3 ಸಹ ಖಂಡೋಜಿ ರಾವ್ ಹಾಗೂ ಗುಂಡೋಜಿ ರಾವ್ ಜಂಟಿಯಾಗಿ ಖರೀದಿ ಮಾಡಿದ ಆಸ್ತಿಯ ಕ್ರಯಪತ್ರ ಎಂದರೆ ನಿಜ. ನಿಪಿ 4 ಸಹ ಖಂಡೋಜಿ ರಾವ್ ಹಾಗೂ ಗುಂಡೋಜಿ ರಾವ್ ಜಂಟಿಯಾಗಿ ಖರೀದಿ ಮಾಡಿದ ಆಸ್ತಿಯ ಕ್ರಯಪತ್ರ ಎಂದರೆ ನಿಜ. ಸಾಕ್ಷಿಗೆ ಈಗ ನಿಪಿ 5 ನ್ನು ತೋರಿಸಲಾಗಿ ಅದು ವಾದಿ ಹೆಸರಿಗೆ ಆದ ಹಕ್ಕು ಬಿಡುಗಡೆ ಪತ್ರ ಎಂದರೆ ಸದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ.

13. ಸಾಕ್ಷಿಗೆ ಈಗ ನಿಪಿ 7 ನ್ನು ತೋರಿಸಲಾಗಿ ಅದರಲ್ಲಿ ಖಂಡೋಜಿ ರಾವ್ ಹಾಗೂ ಗುಂಡೋಜಿ ರಾವ್‌ರವರ ಹೆಸರು ಜಂಟಿಯಾಗಿ ಇದೆ ಎಂದು ತೋರಿಸಲಾಗಿದ್ದು ವ್ಯವಸಾಯಗಾರರ ಕಲಂ ನಲ್ಲಿ ಖಂಡೋಜಿರಾವ್ ರವರ ಹೆಸರು ಇದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ನಿಪಿ 8 ನ್ನು ತೋರಿಸಲಾಗಿ ಅದರಲ್ಲಿಯು ಕೂಡ ಖಂಡೋಜಿ ರಾವ್ ಹಾಗೂ ಗುಂಡೋಜಿ ರಾವ್‌ರವರ ಹೆಸರು ಜಂಟಿಯಾಗಿ ಬರುತ್ತಿದ್ದು ವ್ಯವಸಾಯಗಾರರ ಕಲಂ ನಲ್ಲಿ ಖಂಡೋಜಿ ರಾವ್ ರವರ ಹೆಸರು ಇದೆ ಎಂದರೆ ಅದನ್ನು ಮಾಡಿಸಿಕೊಂಡಿದ್ದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ನಿಪಿ 7 ಮತ್ತು 8 ನ್ನು ತೋರಿಸಿದ್ದು ಅದನ್ನು ಸಾಕ್ಷಿ

ನೋಡಿಕೊಂಡು ಅದರಲ್ಲಿ ಖಂಡೋಜಿ ರಾವ್ ಹಾಗೂ ಗುಂಡೋಜಿ ರಾವ್ ರವರ ಹೆಸರು ಜಂಟಿಯಾಗಿ ವ್ಯವಸಾಯಗಾರರ ಕಲಂ ನಲ್ಲಿ ಖಂಡೋಜಿ ರಾವ್ ರವರ ಹೆಸರು ಇದೆ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ನಿಪಿ 11 ರಿಂದ 13 ರನ್ನು ತೋರಿಸಲಾಗಿ ಖಂಡೋಜಿ ರಾವ್ ಹಾಗೂ ಗುಂಡೋಜಿ ರಾವ್ ರವರ ಹೆಸರು ಜಂಟಿಯಾಗಿ ವ್ಯವಸಾಯಗಾರರ ಕಲಂ ನಲ್ಲಿ ಖಂಡೋಜಿ ರಾವ್ ರವರ ಹೆಸರು ಇದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಅದರಲ್ಲಿರುವುದನ್ನು ಮಾತ್ರ ಹೇಳುತ್ತೇನೆ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ನಿಪಿ 14 ನ್ನು ತೋರಿಸಲಾಗಿ ಅದರಲ್ಲಿ ಕೂಡ ಖಂಡೋಜಿ ರಾವ್ ಹಾಗೂ ಗುಂಡೋಜಿ ರಾವ್ ರವರ ಹೆಸರು ಜಂಟಿಯಾಗಿ ಬರುತ್ತಿದೆ ಎಂದರೆ ನಿಜ. ನಿಪಿ 14 ರ ಪ್ರಕಾರ ಗುಂಡೋಜಿರಾವ್ ರವರ ಹೆಂಡತಿ ಲಕ್ಷ್ಮಿ ಬಾಯಿ ಮಾತ್ರ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ನಿಜ. ನಿಪಿ 14 ರ ಪ್ರಕಾರ ಖಾತೆ ಪವತಿ ಎಂದು ಬರೆಯಲಾಗಿದೆ ಎಂದರೆ ಪವತಿ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ಹೇಳುತ್ತಾರೆ. ನಿಪಿ 14 ರಲ್ಲಿ ಪವತಿ ಸಬೂಬು ಖಾತೆದಾರರ ವಾರಸುದಾರರಾದ ಶ್ರೀಮತಿ ಲಕ್ಷ್ಮಿಬಾಯಿರವರಿಗೆ ಖಂಡೋಜಿರಾವ್‌ರವರಿಂದ ಷರಾ ಪತ್ರ ಬರೆದುಕೊಟ್ಟಿರುತ್ತಾರೆ ಇದರಂತೆ ಪಾವತಿ ತಖ್ತೆ ಮೇರೆಗೆ ಶ್ರೀಮತಿ ಲಕ್ಷ್ಮಿಬಾಯಿರವರಿಗೆ ಖಾತೆ ಬದಲಾಯಿಸುವ ಆದೇಶಕ್ಕಾಗಿ ಚಿತ್ತಾ ಅದರ ಬಗ್ಗೆ ನನಗೆ ಮಾಹಿತಿಇಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಮೇಲೆ ಹೇಳಿದ ವಿಷಯವನ್ನು ನಿಪಿ 14 ರಲ್ಲಿ ಬರೆಯಲಾಗಿದೆ ಎಂದು ಹೇಳುತ್ತಾರೆ. ನಿಪಿ 1 ರಿಂದ 4 ರಲ್ಲಿ ತೋರಿಸಿದ ಆಸ್ತಿಗಳಿಗೆ ಖಂಡೋಜಿ ರಾವ್ ಮತ್ತು ಗುಂಡೋಜಿ ರಾವ್ ರವರು ಹಕ್ಕುದಾರರಾಗಿ ಅನುಭವಿಸಿಕೊಂಡು ಸ್ವಾಧೀನತೆ ಹೊಂದಿದ್ದರು ಎಂದರೆ ನಿಜ. ನಿಪಿ 1 ರಿಂದ 4 ರಲ್ಲಿ ತೋರಿಸಿದ ಆಸ್ತಿಗಳೇ ದಾವಾ ಆಸ್ತಿಗಳು ಎಂದರೆ ನಿಜ.

14. ಖಂಡೋಜಿ ರಾವ್ ಮತ್ತು ಗುಂಡೋಜಿ ರಾವ್ ರವರ ಮಧ್ಯೆ ವಿಭಾಗ ಪತ್ರ ಆಗಿರುತ್ತದೆ. ಅವರು ವಿಭಾಗಪತ್ರವನ್ನು ವಡ್ಡರಹಳ್ಳಿಯಲ್ಲಿ ಮಾಡಿರುತ್ತಾರೆ. ವಿಭಾಗ ಪತ್ರವನ್ನು ಬೆಳಿಗ್ಗೆ 10 ಅಥವಾ 11 ಗಂಟೆಗೆ ಮಾಡಿರುತ್ತಾರೆ. ವಿಭಾಗ ಪತ್ರ ನೊಂದಣಿಯಾಗಿರುತ್ತದೆಯೋ ಇಲ್ಲವೋ ಗೊತ್ತಿಲ್ಲ. ವಿಭಾಗ ಪತ್ರ ಆಗುವಾಗ ನಾನು, ನನ್ನ ತಮ್ಮ, ನನ್ನ ಹೆಂಡತಿಯ ಅಣ್ಣ ಗಂಗೋಜಿ ರಾವ್ ಮತ್ತು ಇನ್ನೊಬ್ಬರು ಬೇರೆ ಊರಿನವರು ಇದ್ದರು. ವಿಭಾಗಪತ್ರವನ್ನು ಬರೆಯಲು ಮಾಹಿತಿಯನ್ನು ನನ್ನ ಮಾವ ಹಾಗೂ ಮಾವನ ಅಣ್ಣ ಕೊಟ್ಟಿರುತ್ತಾರೆ. ಸಾಕ್ಷಿ ಮುಂದುವರೆದು ಮಾವ ಅಂದರೆ ಗುಂಡೋಜಿ ರಾವ್ ಎಂದು ಹೇಳುತ್ತಾರೆ, ಅಣ್ಣ ಅಂದರೆ ಖಂಡೋಜಿ ರಾವ್ ಎಂದು ಹೇಳುತ್ತಾರೆ. ವಿಭಾಗ ಪತ್ರವನ್ನು ಛಾಪಾ ಕಾಗದದ ಮೇಲೆ ಬರೆದಿರುತ್ತಾರೆ. ವಿಭಾಗ ಪತ್ರದ ಬರವಣಿಗೆಯನ್ನು ಸುಮಾರು ಬೆಳಿಗ್ಗೆ 11 ಗಂಟೆಗೆ ಶುರು ಮಾಡಿರುತ್ತಾರೆ.

ನನ್ನನ್ನು ಖಂಡೋಜಿ ರಾವ್ ಮತ್ತು ಗುಂಡೋಜಿ ರಾವ್ ಇಬ್ಬರು ಕರೆದಿರುತ್ತಾರೆ. ನನ್ನನ್ನು ವಿಭಾಗ ಪತ್ರ ಆದಾಗ ಕರೆದಿರುತ್ತಾರೆ. ಆಗ ನಾನು ಬೆಂಗಳೂರಿನಲ್ಲಿ ವಾಸವಿದ್ದೆ. ಬೆಂಗಳೂರಿನಿಂದ ವಡ್ಡರ ಹಳ್ಳಿಗೆ ಬರಲು ನಾನು ಅರ್ಧ ಒಂದು ಗಂಟೆ ತೆಗೆದುಕೊಂಡಿರುತ್ತೇನೆ. ವಿಭಾಗದ ಕರಾರು ಪತ್ರವನ್ನು ಬರೆಯಲು 10 ಗಂಟೆಗೆ ಶುರು ಮಾಡಿ ಮದ್ಯಾಹ್ನ 3.00 ಗಂಟೆಗೆ ಮುಗಿಸಿರುತ್ತಾರೆ. ನಾನು ಬಂದ ನಂತರ ವಿಭಾಗದ ಕರಾರು ಪತ್ರವನ್ನು ಬರೆಯುವವರು ಬಂದಿರುತ್ತಾರೆ. ಬಿಕ್ಲಂದಾರರು ಸುಮಾರು 11 ಅಥವಾ 11.30 ಕ್ಕೆ ಬಂದಿರುತ್ತಾರೆ. ನಾನು ಬರುವ ಮೊದಲು ಗುಂಡೋಜಿ ರಾವ್ ಹಾಗೂ ಖಂಡೋಜಿ ರಾವ್ ರವರು ಬಂದಿರಲಿಲ್ಲ. ವಿಭಾಗದ ಕರಾರು ಪತ್ರ ಬರೆಯಲು ನಾನು ಬರುವ ಮೊದಲು ನಮ್ಮ ಊರಿನ ಗಂಗೋಜಿ ರಾವ್ ಎಂಬುವವರು ಅಲ್ಲಿಯೇ ಇದ್ದರು. ನಾನು ಬೆಂಗಳೂರಿನಿಂದ ನೇರವಾಗಿ ನನ್ನ ಅಣ್ಣನ ಮನೆಗೆ ಬಂದಿರುತ್ತೇನೆ. ಎಣ್ಣೆಗೆರೆ ಗ್ರಾಮದಲ್ಲಿ ವಿಭಾಗದ ಕರಾರು ಪತ್ರ ಬರೆಯುವಾಗ ಶ್ಯಾನುಭೋಗರ ಮನೆ ಇತ್ತು ಈಗ ಇಲ್ಲ. ಎಣ್ಣೆಗೆರೆ ಗ್ರಾಮದಲ್ಲಿ ಇದುವರೆಗೂ ಶ್ಯಾನುಭೋಗರು ವಾಸ ಮಾಡುತ್ತಿಲ್ಲ ಎಂದರೆ ಆಗ ಇದ್ದರು ಎಂದು ಹೇಳುತ್ತಾರೆ. ಶ್ಯಾನುಭೋಗರ ಹೆಸರು ಸುಬ್ಬರಾಯಪ್ಪ ಇರಬಹುದು. ಎಣ್ಣೆಗೆರೆಯಲ್ಲಿ ಶ್ಯಾನುಭೋಗರ ಮನೆ ಎಲ್ಲಿ ಇತ್ತು ಗೊತ್ತಿಲ್ಲ.

15. ನಾನು ವಿಭಾಗದ ಕರಾರು ಪತ್ರ ಬರೆಯಲು ಬೆಂಗಳೂರಿನಿಂದ ಬೆಳಿಗ್ಗೆ 9-00 ಗಂಟೆಗೆ ಬಂದಿರುತ್ತೇನೆ. ವಿಭಾಗದ ಕರಾರು ಪತ್ರ ಬರೆಯಲು ಛಾಪಾ ಕಾಗದವನ್ನು ನನ್ನ ಸಹೋದರ ತರಿಸಿದ್ದರು. ಎಷ್ಟು ಛಾಪಾ ಕಾಗದಗಳನ್ನು ತರಿಸಿದ್ದರು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಬಹುಶಃ 2 ಕಾಗದಗಳನ್ನು ತರಿಸಿರಬಹುದು ಎಂದು ಹೇಳುತ್ತಾರೆ. ಅವುಗಳು 2 ಅಥವಾ 5 ರೂ ಮುಖಬೆಲೆಯ ಛಾಪಾ ಕಾಗದಗಳು ಇರಬಹುದು. ವಿಭಾಗದ ಕರಾರು ಪತ್ರದ ಆಸ್ತಿಗಳ ದಾಖಲೆಗಳನ್ನು ನಾನು ನೋಡಿರುತ್ತೇನೆ. ವಿಭಾಗದ ಕರಾರು ಪತ್ರ ಬರೆಯುವಾಗ ನಾನು ಆ ಆಸ್ತಿಗಳನ್ನು ನೋಡಿರುತ್ತೇನೆ. ನಾನು ಯಾವ ಯಾವ ದಾಖಲೆಗಳನ್ನು ನೋಡಿರುತ್ತೇನೆ ನೆನಪಿಲ್ಲ. ನಾನು ಎಷ್ಟು ಆಸ್ತಿಗಳ ದಾಖಲೆಗಳನ್ನು ನೋಡಿರುತ್ತೇನೆ ನೆನಪಿಲ್ಲ. ವಿಭಾಗದ ಕರಾರು ಪತ್ರವನ್ನು ಒಂದುಕಾಗದದ ಹಿಂದೆ ಮುಂದೆ ಮತ್ತು ಇನ್ನೊಂದು ಕಾಗಗದ ಒಂದು ಭಾಗದಲ್ಲಿ ಪೂರ್ಣವಾಗಿ ಬರೆದಿದ್ದು ಇನ್ನೊಂದು ಭಾಗದಲ್ಲಿ ಅರ್ಧ ಬರೆದಿರುತ್ತಾರೆ. ವಿಭಾಗದ ಕರಾರು ಪತ್ರದಲ್ಲಿ ನನಗೆ ಗೊತ್ತಿರುವ ಹಾಗೆ ಸರ್ವೆ ನಂ 25/2, 56/2 ಮತ್ತು 57 ಇರುತ್ತವೆ. ಈ ಆಸ್ತಿಗಳನ್ನು ಹೊರತುಪಡಿಸಿ ವಿಭಾಗದ ಕರಾರು ಪತ್ರದಲ್ಲಿ ಬೇರೆ ಆಸ್ತಿಗಳು ಇರುತ್ತವೆಯೋ ಇಲ್ಲವೋ ನನಗೆ ಗೊತ್ತಿಲ್ಲ.

16. ವಿಭಾಗದ ಕರಾರು ಪತ್ರದ ಪ್ರಕಾರ ಗುಂಡೋಜಿ ರಾವ್ ರವರಿಗೆ ಸರ್ವೆ ನಂ 25/2, 56/2 ಮತ್ತು 57 ಭಾಗಕ್ಕೆ ಬಂದಿರುತ್ತದೆ. ಈ ಆಸ್ತಿಗಳಲ್ಲಿ ಯಾರಿಗೆ ಎಷ್ಟು ಭಾಗ ಹೋಗಿರುತ್ತದೆ ಗೊತ್ತಿಲ್ಲ. ವಿಭಾಗ ಕರಾರು ಪತ್ರಕ್ಕೆ ಗುಂಡೋಜಿ ರಾವ್ ಮತ್ತು ಖಂಡೋಜಿ ರಾವ್ ಸಹಿ ಮಾಡಿರುತ್ತಾರೆ. ಅವರು ಎಷ್ಟು

ಸಹಿಗಳನ್ನು ಮಾಡಿರುತ್ತಾರೆ ಗೊತ್ತಿಲ್ಲ. ವಿಭಾಗದ ಕರಾರು ಪತ್ರ ಆದ ನಂತರ ಗುಂಡೋಜಿ ರಾವ್ ಮತ್ತು ಖಂಡೋಜಿ ರಾವ್ ರವರ ಮದ್ಯೆ ವಿಭಾಗ ಆಗಿದೆಯೇ ಇಲ್ಲವೋ ಗೊತ್ತಿಲ್ಲ. ವಿಭಾಗದ ಕರಾರು ಪತ್ರಕ್ಕೆ ಮೊದಲು ನನ್ನ ಬಾಮೈದಾ ವೆಂಕೋಬಾ ರಾವ್ ಸಹಿ ಮಾಡಿರುತ್ತಾರೆ, ನಂತರ ನಾನು ಸಹಿ ಮಾಡಿರುತ್ತೇನೆ. ನಂತರ ನೆಲಮಂಗಲದ ನರೋಜಿ ರಾವ್ ರವರು, ನಂತರ ಗಂಗೋಜಿ ರಾವ್ ರವರು ಸಹಿ ಮಾಡಿರುತ್ತಾರೆ. ವಿಭಾಗದ ಕರಾರು ಪತ್ರಕ್ಕೆ ಕಾಗದವನ್ನು ನನ್ನ ಸಹೋದರ ಯಾವಾಗ ತೆಗೆದುಕೊಂಡು ಬಂದಿರುತ್ತಾರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ವಿಭಾಗದ ಕರಾರು ಪತ್ರ ಬರೆಯುವ ದಿನವೇ ತಂದಿರುತ್ತಾರೆ. ಸಾಕ್ಷಿ ಮುಂದುವರೆದು ಒಂದು ದಿನದ ಮೊದಲು ತಂದಿರುತ್ತಾರೆ ಎಂದು ಹೇಳುತ್ತಾರೆ. ಯಾವುದೇ ವಿಭಾಗದ ಕರಾರು ಪತ್ರ ಆಗಿಲ್ಲ ಗುಂಡೋಜಿ ರಾವ್ ರವರು ನನ್ನ ಹೆಂಡತಿಯ ತಂದೆಯಾಗಿದ್ದರಿಂದ ಅವರಿಗೆ ಸಹಾಯ ಮಾಡಲು ನಾನು ಮತ್ತು ನನ್ನ ಬಾಮೈದಾ ಮತ್ತು ಇತರೆ ಸಾಕ್ಷಿದಾರರು ಸೇರಿ ವಿಭಾಗದ ಕರಾರು ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ಭಾವನಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಯಾವುದೇ ವಿಭಾಗದ ಕರಾರು ಪತ್ರ ಆಗಿರದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

17. ವಿಭಾಗದ ಕರಾರು ಪತ್ರದ ಆಧಾರದ ಮೇರೆಗೆ ಅವರವರ ಹೆಸರಿಗೆ ದಾಖಲಾತಿಗಳು ಆಗಿದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯ 6ನೇ ಪ್ರತಿವಾದಿ ಗೊತ್ತಿಲ್ಲ ಹೆಸರು ಹೇಳಿದರೆ ಗೊತ್ತಾಗುತ್ತದೆ ಎಂದು ಹೇಳುತ್ತಾರೆ. ನನಗೆ ಕೆ. ಎಸ್ ವೆಂಕಟೇಶ್ ರವರು ಗೊತ್ತಿರುತ್ತಾರೆ. ಸಾಕ್ಷಿಗೆ ಈಗ ನಿಪಿ 6ನ್ನು ತೋರಿಸಲಾಗಿ ಅದು ಕೆ ಎಸ್ ವೆಂಕಟೇಶ್ ರವರಿಗೆ ಬರೆದುಕೊಟ್ಟ ಕ್ರಯಪತ್ರವಾಗಿರುತ್ತದೆ ಎಂದರೆ ನಿಜ. ನಿಪಿ 6ಕ್ಕೆ ದಶರಥರಾವ್ ರವರಾಗಲೀ ಅಥವಾ ಅವರ ತಾಯಿಯಾಗಲೀ ಪಕ್ಷಗಾರರು ಅಲ್ಲ ಎಂದರೆ ಗೊತ್ತಿಲ್ಲ. ನಿಪಿ 6ನ್ನು 2 ಮತ್ತು 3ನೇ ದಾವಾ ಆಸ್ತಿಗಳ ಮೇಲೆ ವಾದಿಯ ಹಕ್ಕನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ಪ್ರತಿವಾದಿಗಳು ಶಾರೀಕಾಗಿ ಸೃಷ್ಟಿ ಮಾಡಿದ ಕ್ರಯಪತ್ರ ಆಗಿರುತ್ತದೆ ಎಂದರೆ ಗೊತ್ತಿಲ್ಲ.

18. ವಿಭಾಗದ ಕರಾರು ಪತ್ರ ನಿಪಿ 1 ರಿಂದ 4ರಲ್ಲಿ ತೋರಿಸಿರುವ ಆಸ್ತಿಗಳ ಮೇಲೆ ಆಗಿರುತ್ತದೆಯೋ ಇಲ್ಲವೋ ಗೊತ್ತಿಲ್ಲ. ವಿಭಾಗದ ಕರಾರು ಪತ್ರ ನಾವು ಸೃಷ್ಟಿ ಮಾಡಿದ ದಾಖಲೆ ಎಂದರೆ ಸರಿಯಲ್ಲ. ನನಗೆ 1 ರಿಂದ 5ನೇ ಪ್ರತಿವಾದಿಗಳ ಕುಟುಂಬದ ಎಲ್ಲಾ ವಿಚಾರಗಳು ಗೊತ್ತಿರುತ್ತವೆ. ವಿಭಾಗದ ಕರಾರು ಪತ್ರ ಚಾಲ್ತಿಗೆ ಬಂದು ಅದರ ಮೇಲೆ ದಾಖಲೆಗಳು ಆಗಿರುತ್ತದೆಯೋ ಇಲ್ಲವೋ ನಾನು ನೋಡಿಲ್ಲ. ವಿಭಾಗದ ಕರಾರು ಪತ್ರವನ್ನು ಈ ನ್ಯಾಯಾಲಯದ ಮುಂದೆ ಹೊರತುಪಡಿಸಿ ಬೇರೆ ಎಲ್ಲಿಯೂ ಹಾಜರುಪಡಿಸಿಲ್ಲ ಎಂದರೆ ಗೊತ್ತಿಲ್ಲ.

19. ನಿಪಿ 6ರಲ್ಲಿ ವಿಭಾಗದ ಕರಾರು ಪತ್ರದ ಬಗ್ಗೆ ಹೇಳಿಲ್ಲ ಎಂದರೆ 6ನೇ ಪ್ರತಿವಾದಿ ಯಾರು ನನಗೆ

ಗೊತ್ತಿಲ್ಲ ಎಂದು ಹೇಳುತ್ತಾರೆ. ಗುಂಡೋಜಿರಾವ್ ರವರ ಹಸೆರಿಗೆ ವಿಭಾಗದ ಕರಾರು ಪತ್ರದ ಪ್ರಕಾರ ಖಾತೆ ಪಹಣಿಯಾಗಿತ್ತು. ಸಾಕ್ಷಿ ಮುಂದುವರೆದು ಆಗಿಲ್ಲ ಎಂದು ಹೇಳುತ್ತಾರೆ. ಗುಂಡೋಜಿರಾವ್ ರವರ ಹೆಸರಿಗೆ ವಿಭಾಗದ ಕರಾರು ಪತ್ರದ ಪ್ರಕಾರ ಖಾತೆ ಮತ್ತು ಪಹಣಿ 1984 ರಲ್ಲಿ ಆಗಿತ್ತು. ಯಾವುದೇ ವಿಭಾಗದ ಕರಾರು ಪತ್ರ ಆಗಿಲ್ಲ ಖಾತೆ ಪಹಣಿಯಾಗಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**